ಶ್ರೀಯರಸ ಗಾಂಗೇಯನುತ ಕೌಂ ತೇಯ ವಂದಿತಚರಣ ಕಮಲದ
ಛಾಯತಾಂಬಕರೂಪ ಚಿನ್ಮಯ ದೇವಕೀತನಯ ||
ರಾಯ ರಘುಕುಲವರ್ಯ ಭೂಸುರ ಪ್ರಿಯಸುರಪುರನಿಲಯ ಚೆನ್ನಿಗ
ರಾಯಚತುರೋಪಾಯ ರಕ್ಷಿಸು ನಮ್ಮನನವರತ || ೧ ||
ದೇವದೇವ ಜಗದ್ಭರಿತ ವಸು ದೇವಸುತ ಜಗದೇಕನಾಥ ರ
ಮಾವಿನೋದಿತ ಸಜ್ಜನಾನತ ನಿಖಿಲ ಗುಣಭರಿತ ||
ಭಾವಜಾರಿಪ್ರಿಯ ನಿರಾಮಯ ರಾವಣಾಂತಕ ರಘುಕುಲಾನ್ವಯ
ದೇವ ಅಸುರವಿರೋಧಿ ರಕ್ಷಿಸು ನಮ್ಮನನವರತ || ೨ ||
ಅನುಪಮಿತ ಚಾರಿತ್ರ ಕರುಣಾ ವನದಿ ಭಕ್ತ ಕುಟುಂಬಿ ಯೋಗೀ
ಆನಹೃದಯ ಪರಿಪೂರ್ಣ ನಿತ್ಯಾನಂದ ನಿಗಮನುತ ||
ವನಜನಾಭ ಮುಕುಂದ ಮುರಮ ರ್ದನ ಜನಾರ್ದನ ತ್ರೈ ಜಗತ್ಪಾ
ವನ ಸುರಾರ್ಚಿತ ದೇವ ರಕ್ಷಿಸು ನಮ್ಮನನವರತ || ೩ ||
ಕಮಲಸಂಭವವಿನುತ ವಾಸವ ನಮಿತ ಮಂಗಳ ಚರಿತ ದುರಿತ
ಕ್ಷಮಿತ ರಾಘವ ವಿಶ್ವಪೂಜಿತ ವಿಶ್ವ ವಿಶ್ವಮಯ ||
ಅಮಿತವಿಕ್ರಮ ಭೀಮ ಸೀತಾ ರಮಣ ವಾಸುಕಿಶಯನ ಖಗವತಿ
ಗಮನ ಕಂಜಜನಯ್ಯ ರಕ್ಷಿಸು ನಮ್ಮನನವರತ || ೪ ||
ಕ್ಷೀರವಾರಿಧಿಶಯನ ಶಾಂತಾ ಕಾರಾ ವಿವಿಧವಿಚಾರ ಗೋಪೀ
ಜಾರ ನವನೀತಚೋರ ಚಕ್ರಾಧಾರ ಭವದೂರ ||
ಮಾರಪಿತ ಗುಣಹಾರ ಸರಸಾ ಕಾರ ರಿಪುಸಂಹಾರ ತುಂಬುರ
ನಾರದಪ್ರಿಯ ವರದ ರಕ್ಷಿಸು ನಮ್ಮನನವರತ || ೫ ||
ತಾಮರಸದಳನಯನ ಭಾರ್ಗವ ರಾಮ ಹಲಧರರಾಮ ದಶರಥ
ರಾಮ ಮೇಘಶ್ಯಾಮ ಸದ್ಗುಣಧಾಮ ನಿಸ್ಸೀಮ ||
ಸಾಮಗಾನಪ್ರೇಮ ಕಾಂಚನ ಧಾಮಧರ ಸುತ್ರಾಮವಿರಚಿತ
ನಾಮ ರವಿಕುಲಸೋಮ ರಕ್ಷಿಸು ನಮ್ಮನನವರತ || ೬ ||
ವೇದಗೋಚರ ವೇಣುನಾದವಿ ನೊದ ಮಂದರಶೈಲಧರ ಮಧು
ಸೂದನಾಚ್ಯುತ ಕಂಸದಾನವರಿಪು ಮಹಾಮಹಿಮ ||
ಯಾದವೇಂದ್ರ ಯಶೋದೆನಂದನ ನಾದಬಿಂದುಕಳಾತಿಶಯ ಪ್ರ
ಹ್ಲಾದರಕ್ಷಕ ವರದ ರಕ್ಷಿಸು ನಮ್ಮನನವರತ || ೭ ||
ಅಕ್ಷಯಾಶ್ರಿತ ಸುಜನಜನ ಸಂ ರಕ್ಷಣ ಶ್ರೀವತ್ಸ ಕೌಸ್ತುಭ
ಮೋಕ್ಷದಾಯಕ ಕುಟಿಲದಾನವಶಿಕ್ಷ ಕುಮುದಾಕ್ಷ ||
ಪಕ್ಷಿವಾಹನ ದೇವಸಂಕುಲ ಪಕ್ಷಜಗದಧ್ಯಕ್ಷವರನಿಟಿ
ಲಾಕ್ಷ ಸಖ ಸರ್ವೇಶ ರಕ್ಷಿಸು ನಮ್ಮನನವರತ || ೮ ||
ಚಿತ್ರಕೂಟನಿವಾಸ ವಿಶ್ವಾ ಮಿತ್ರ ಕ್ರತುಸಂರಕ್ಷಕ ರವಿ ಶಶಿ
ನೇತ್ರ ಭವ್ಯಚರಿತ್ರ ಸದ್ಗುಣಗಾತ್ರ ಸತ್ಪಾತ್ರ ||
ಧಾತ್ರಿಜಾಂತಕ ಕಪಟನಾಟಕ ಸೂತ್ರ ಪರಮಪವಿತ್ರ ಫಲ್ಗುಣ
ಮಿತ್ರ ವಾಕ್ಯವಿಚಿತ್ರ ರಕ್ಷಿಸು ನಮ್ಮನನವರತ || ೯ ||
ಮಂಗಳಾತ್ಮಕ ದುರಿತತಿಮಿರ ಪ ತಂಗ ಗರುಡತುರಂಗ ರಿಪುಮದ
ಭಂಗ ಕೀರ್ತಿತರಂಗ ಪುರಹರಸಂಗ ನೀಲಾಂಗ ||
ಅಂಗದಪ್ರಿಯನಂಗಪಿತ ಕಾ ಳಿಂಗಮರ್ದನ ಅಮಿತಾ ಕರುಣಾ
ಪಾಂಗ ಶ್ರೀನರಸಿಂಗ ರಕ್ಷಿಸು ನಮ್ಮನನವರತ || ೧೦ ||

ದಾಶರಥಿ ವೈಕುಂಠನಗರಿ ನಿ ವಾಸ ತ್ರೈಜಗದೀಶ ಪಾಪ ವಿ
ನಾಶ ಪರಮವಿಲಾಸ ಹರಿಸರ್ವೇಶ ದೇವೇಶ ||
ವಾಸುದೇವ ದಿನೇಶ ಶತಸಂ ಕಾಶ ಯದುಕುಲವಂಶತಿಲಕ ಪ
ರಾಶರಾನತ ದೇವ ರಕ್ಷಿಸು ನಮ್ಮನನವರತ || ೧೧ ||
ಕುಂದಕುಟ್ಮಲರದನ ಪರಮಾ ನಂದ ಹರಿ ಗೋವಿಂದ ಸನಕ ಸ
ನಂದ ವಂದಿತ ಸಿಂಧುಬಂಧನ ಮಂದರಾದ್ರಿಧರ ||
ಇಂದಿರಾಪತ ವಿಜಯಸಖ ಅರ ವಿಂದನಾಭ ಪುರಂದರಾರ್ಚಿತ
ನಂದಕುಲ ಮುಕುಂದ ರಕ್ಷಿಸು ನಮ್ಮನನವರತ || ೧೨ ||
ಬಾಣಬಾಹುಚ್ಛೇದ ರಾವಣ ಪ್ರಾಣನಾಶನ ಪುಣ್ಯನಾಮ ಪು
ರಾಣಪುರುಷೋತ್ತಮ ನಿಪುಣ ಅಣುರೇಣು ಪರಿಪೂರ್ಣ ||
ಕ್ಷೋಣಿಪತ ಸುಲಲಿತ ಸುದರ್ಶನ ಪಾಣಿ ಪಾಂಡವರಾಜಕಾರ್ಯ ಧು
ರೀಣ ಜಗನಿರ್ಮಾಣ ರಕ್ಷಿಸು ನಮ್ಮನನವರತ || ೧೩ ||
ನೀಲವರ್ಣ ವಿಶಾಲ ಶುಭಗುಣ ಶೀಲ ಮುನಿಕುಲಪಾಲ ಲಕ್ಷ್ಮೀ
ಲೋಲ ರಿಪು ಶಿಶುಪಾಲ ಮಸ್ತಕಶೂಲ ವನಮಾಲ ||
ಮೂಲಕಾರಣ ವಮಲ ಯಾದವ ಜಾಲಹಿತ ಗೋಪಾಲ ಅಗಣಿತ
ಲೀಲ ಕೋಮಲಕಾಯ ರಕ್ಷಿಸು ನಮ್ಮನನವರತ || ೧೪ ||
ನಾಗನಗರಿ ಧರಿತ್ರಿ ಕೋಶ ವಿ ಭಾಗ ತಂತ್ರ ನಿಯೋಗಗಮನ
ರಾಗ ಪಾಂಡವರಾಜಜಿತ ಸಂಗ್ರಾಮ ನಿಸ್ಸೀಮ ||
ಯೋಗಗಮ್ಯ ಭವಾಬ್ಧಿ ವಿಷಧರ ನಾಗ ಗಾರುಡಮಂತ್ರವಿದ ಭವ
ರೋಗವೈದ್ಯ ವಿಚಿತ್ರ ರಕ್ಷಿಸು ನಮ್ಮನನವರತ || ೧೫ ||
ಶ್ರೀಮದುತ್ಸಹ ದೇವನುತ ಶ್ರೀ ರಾಮ ನಿನ್ನಯ ಚರಣಸೇವಕ
ಪ್ರೇಮದಿಂ ಸಾಷ್ಟಾಂಗವೆರಗಿಯೆ ಮಾಳ್ಪೆ ಬಿನ್ನಪವ ||
ಈ ಮಹಿಯೊಳೀವರಿಗೆ ನಾವು ಸು ಕ್ಷೀಮಿಗಳು ನಿನ್ನಯ ಪದಾಬ್ಜ
ಕ್ಷೇಮವಾರ್ತೆಯನರುಹಿ ರಕ್ಷಿಸು ನಮ್ಮನನವರತ || ೧೬ ||
ಈಗಲೀ ಮರ್ಯಾದೆಯಲಿ ಶರ ಣಾಗತರ ಸೇವೆಯೊಳು ಹೊಂಪುಳಿ
ಯಾಗಿ ಬಾಳುವರೇನು ಧನ್ಯರೊ ಹರ ಮಹಾದೇವ ||
ಭೋಗಭಾಗ್ಯವ ಬಯಸಿ ಮುಕ್ತಿಯ ನೀಗಿ ನಿಮ್ಮನು ಭಜಿಸಲರಿಯದ
ಯೋಗಿಗಳ ಮಾತೇನು ರಕ್ಷಿಸು ನಮ್ಮನನವರತ || ೧೭ ||
ಭಕ್ತಿಸಾರದ ಚರಿತೆಯನು ಹರಿ ಭಕ್ತರಾಲಿಸುವಂತೆ ರಚಿಸುವೆ
ಯುಕ್ತಿಯಲಿ ಬರೆದೋದಿದವರಿಷ್ಟಾರ್ಥ ಸಿದ್ಧಿಪುದು ||
ಮುಕ್ತಿಗಿದು ನೆಲೆದೋರಿಪುದು ಹರಿ ಭಕ್ತರನು ಲಾಲಿಪುದು ನಿಜವತಿ
ಭಕ್ತಿಗೊಲಿವಂದದಲಿ ರಕ್ಷಿಸು ನಮ್ಮನನವರತ || ೧೮ ||
ನಳಿನಲೋಚನ ನಿನ್ನ ಮೂರ್ತಿಯ ಕಳೆ ಬೆಳಗುತಿದೆ ಲಹರಿಯಲಿ ಭೂ
ತಳದೊಚ್ಚರಿಯಾದ ನಾಮಾಮೃತ ಸಮುದ್ರದಲಿ ||
ಬಳಸುವರು ಸತ್ಕವಿಗಳಿವರಗ್ಗಳಿಕೆ ಎನಗಿನಿತಿಲ್ಲ ಸನ್ಮತಿ
ಗಳಿಗೆ ಮಂಗಳವಿತ್ತು ರಕ್ಷಿಸು ನಮ್ಮನನವರತ || ೧೯ ||
ಗಿಳಿಯಮರಿಯನು ತಂದು ಪಂಜರ ದೊಳಗೆ ಪೋಷಿಸಿ ಕಲಿಸಿ ಮೃದು
ನುಡಿಗಳನು ಲಾಲಿಸು ಕೇಳ್ವ ಪರಿಣತರಂತೆ ನೀನೆನಗೆ ||
ತಿಳುಹು ಮತಿಯನು ಎನ್ನ ಜಿಹ್ವೆಗೆ ಮೊಳಗುವಂದದಿ ನಿನ್ನ ನಾಮಾ
ವಳಿಯ ಪೊಗಳಿಕೆಯಿತ್ತು ರಕ್ಷಿಸು ನಮ್ಮನನವರತ || ೨೦ ||

ಪೊಗಲಳವೇ ನಿನ್ನ ನಾಮದ ಸುಗುಣ ಸಚ್ಚಾರಿತ್ರ ಕಥನವ
ನಗಣಿತೋಪಮ ಅಮಿತ ವಿಕ್ರಮಗಮ್ಯ ನೀನೆಂದು ||
ನಿಗಮತತಿ ಕೈವಾರಿಸುತ ಪದ ಯುಗವ ಕಾಣದೆ ಬಳಲುತಿದೆ ವಾ
ಸುಕಿಶಯ ಸರ್ವೇಶ ರಕ್ಷಿಸು ನಮ್ಮನನವರತ || ೨೧ ||
ವೇದಶಾಸ್ತ್ರಪುರಾಣ ಪುಣ್ಯದ ಹಾದಿಯನು ನಾನರಿಯೆ ತರ್ಕದ
ವಾದದಲಿ ಗುರುಹಿರಿಯರರಿಯದ ಮೂಢಮತಿ ಎನಗೆ ||
ಆದಿಮೂರುತಿ ನೀನು ನೆರೆ ಕರುಣೊ ದಯನು ಹೃದಯಾಂಗಣದಿ ಜ್ಞಾ
ನೋದಯವೆನಗಿತ್ತು ರಕ್ಷಿಸು ನಮ್ಮನನವರತ || ೨೨ ||
ಹರಿವರಿತು ತಾಯ್ತನ್ನ ಶಿಶುವಿಗೆ ಒಸೆದು ಮೊಲೆ ಕೊಡುವಂತೆ ನೀ ಪೋ
ಷಿಸದೇ ಬೇರಿನ್ನಾರು ಪೋಷಕರಾಗಿ ಸಲಹುವರು ||
ಬಸಿರೊಳಗೆ ಬ್ರಹ್ಮಾಂಡಕೋಟಿಯ ಪಸರಿಸಿದ ಪರಮಾತ್ಮನೀನೆಂ
ದುಸುರುತಿವೆ ವೇದಗಳು ರಕ್ಷಿಸು ನಮ್ಮನನವರತ || ೨೩ ||
ಇಬ್ಬರಣುಗರು ನಿನಗೆ ಅವರೊಳ ಗೊಬ್ಬಮಗನೀರೇಳು ಲೋಕದ
ಹೆಬ್ಬೆಳೆಸು ಬೆಳೆವಂತೆ ಕಾರಣಕರ್ತನಾದವನು ||
ಒಬ್ಬ ಮಗನದ ಬರೆದ ಕರಣಿಕ ರಿಬ್ಬರೀ ಲೋಕಪ್ರಸಿದ್ಧರು
ಹಬ್ಬಿಸಿದೆ ಪ್ರಾಣಿಗಳ ರಕ್ಷಿಸು ನಮ್ಮನನವರತ || ೨೪ ||
ಸಿರಿಯು ಕುಲಸತಿ ಸುತನು ಕಮಲಜ ಹಿರಿಯ ಸೊಸೆ ಶಾರದೆ ಸಹೋದರಿ
ಗಿರಿಜೆ ಮೈದುನ ಶಂಕರನು ಸುರರೆಲ್ಲ ಕಿಂಕರರು ||
ನಿರುತ ಮಾಯೆಯು ದಾಸಿ ನಿಜಮಂ ದಿರವಜಾಂಡವು ಜಂಗಮಸ್ಥಾ
ವರುಕುಟುಂಬಿಗ ನೀನು ರಕ್ಷಿಸು ನಮ್ಮನನವರತ || ೨೫ ||
ಸಾಗರನ ಮಗಳರಿಯದಂತೆ ಸ ರಾಗದಲಿ ಸಂಚರಿಸುತಿಹ ಉ
ದ್ಯೋಗವೇನು ನಿಮಿತ್ತ ಕಾರಣವಿಲ್ಲಲೋಕದಲಿ ||
ಭಾಗವತರಾದವರ ಸಲಹುವ ನಾಗಿ ಸಂಚರಿಸುವುದು ಈ ಭವ
ಸಾಗರದಿ ಮುಳುಗಿಸದೆ ರಕ್ಷಿಸು ನಮ್ಮನನವರತ || ೨೬ ||
ಹಸ್ತಿವಾಹನನಾದಿಯಾದ ಸ ಮಸ್ತ ದೇವನಿಕಾಯಾದೊಳಕೆ ಪ್ರ
ಶಸ್ತನಾವನು ನಿನ್ನ ವೋಲ್ ಶರಣಾಗತರ ಪೊರೆದೆ ||
ಹಸ್ತ ಕಲಿತ ಸುದರ್ಶನದೊಳರಿ ಮಸ್ತಕವನಿಳುಹುವ ಪರಾಪರ
ವಸ್ತುವಲ್ಲವೆ ನೀನು ರಕ್ಷಿಸು ನಮ್ಮನನವರತ || ೨೭ ||
ಹಗೆಯರಿಗೆ ವರವೀವರಿಬ್ಬರು ತೆಗೆಯಲರಿಯರು ಕೊಟ್ಟ ವರಗಳ
ತೆಗೆದು ಕೊಡುವ ಸಮರ್ಥರಾರೀ ಜಗಕೆ ನಿನ್ನಂತೆ ||
ಸುಗುಣರಿನ್ನಾರುಂಟು ಕದನವ ಬರೆದು ನಿನ್ನೊಳು ಜೈಸುವವರೀ
ಜಗದೊಳುಂಟೇ ದೇವ ರಕ್ಷಿಸು ನಮ್ಮನನವರತ || ೨೮ ||
ಸುಮನರಸ ವೈರದಲಿ ಕೆಲಬರ ಕುಮತಿಗಳು ತಪದಿಂದ ಭರ್ಗನ
ಕಮಲಜನ ಪದಯುಗವ ಮೆಚ್ಚಿರಿ ವರವ ಪಡೆದಿಹರು ||
ಸಮರಮುಖದೊಳಗುಪಮೆಯಲಿ ವಿ ಕ್ರಮದಿ ವೈರವ ಮಾಡಿದವರಿಗೆ
ಅಮರಪದವಿಯನಿತ್ತೆ ರಕ್ಷಿಸು ನಮ್ಮನನವರತ || ೨೯ ||
ಬಲಿಯ ಬಂಧಿಸಿ ಮೊರೆಯಿಡುವ ಸತಿ ಗೊಲಿದು ಅಕ್ಷಯವಿತ್ತು ಕರುಣದಿ
ಮೊಲೆಯುಣಿಸಿದ ಬಾಲಕಿಯ ಪಿಡಿಸುವನಪಹರಿಸಿ ||
ಶಿಲೆಯ ಸತಿಯಳ ಮಾಡಿ ತ್ರಿಪುರದ ಲಲನೆಯರ ವ್ರತಗೆಡಿಸಿ ಕೂಡಿದ
ಕೆಲಸವುತ್ತಮವಾಯ್ತು ರಕ್ಷಿಸು ನಮ್ಮನನವರತ || ೩೦ ||

ಕರಿಯ ಕಾಯ್ದಾ ಜಲದಿ ಮಕರಿಯ ತರಿದು ಹಿರಣ್ಯಾಕ್ಷಕನ ಸೀಳ್ದಾ
ತರಳನನು ತಲೆಗಾಯ್ದು ಶಕಟಾಸುರ ಹತಮಾಡಿ ||
ದುರುಳಕಂಸನ ಕೊಂದು ಮಗಧನ ಮುರಿದು ವತ್ಸನ ಸಂಹರಿಸಿ ಖರ
ಹರಣವನು ಹಿಂಗಿಸಿದೆ ರಕ್ಷಿಸು ನಮ್ಮನನವರತ || ೩೧ ||
ಶಿಶುತನದ ಸಾಮರ್ಥ್ಯದಲಿ ಕೆಲಸುರರನು ಸಂಹರಿಸಿ ಚಕ್ರವ
ಬಿಸುಟು ಯೌವನಕಾಲದಲಿಯಾ ಪಾಂಡು ಸುತರಿಂದ ||
ವಸುಮತಿಯ ಭಾರವನಿಳುಹಿ ಸಾ ಹಸದಿ ಮೆರೆದವನಾಗೆ ನೀ ಮೆ
ಚ್ಚಿಸಿದೆ ತ್ರಿಜಗವನ್ನೆಲ್ಲ ರಕ್ಷಿಸು ನಮ್ಮನನವರತ || ೩೨ ||
ಎಲ್ಲರಲಿ ನೀನಾಗಿ ಸುಮನಸ ರಲ್ಲಿ ಅತಿಹಿತಿನಾಗಿ ಯಾದವ
ರಲ್ಲಿ ಬಾಂಧವನಾಗಿ ದಾನವರಲ್ಲಿ ಹಗೆಯಾಗಿ ||
ಕೊಲ್ಲಿಸಿದೆ ಭೀಮಾರ್ಜುನರ ಕೈ ಯಲಿ ಕೌರವ ಕುಲವನೆಲ್ಲವ
ಬಲ್ಲಿದನು ನೀನಹುದು ರಕ್ಷಿಸು ನಮ್ಮನನವರತ || ೩೩ ||
ನರಗೆ ಸಾರಥಿಯಾಗಿ ರಣದೊಳು ತುರಗ ನೀರಡಿಸಿದರೆ ವಾರಿಯ
ಸರಸಿಯನು ನಿರ್ಮಿಸಿ ಕಿರೀಟಿಯ ಕೈಲಿ ಸೈಂಧವನ ||
ಶಿರವನು ಕೆಡುಹಿಸಿ ಅವನ ತಂದೆಯ ಕರತಲಕೆ ನೀಡಿಸಿದೆ ಹರಹರ
ಪರಮಸಾಹಸಿ ನೀನು ರಕ್ಷಿಸು ನಮ್ಮನನವರತ || ೩೪ ||
ಬವರದಲಿ ಖತಿಗೊಂಡು ಗದೆಯೊಳು ಕವಿದು ನಿನ್ನಶ್ರುತಾಯಧನು ಹೊ
ಕ್ಕವಘಡಿಸಿ ಹೊಯ್ದಾಡಿ ತನ್ನಾಯುಧದಿ ತಾ ಮಡಿದ ||
ವಿವರವೇನೋ ತಿಳಿಯೆ ಈ ಮಾ ಯವನು ನೀನೇ ಬಲ್ಲೆ ನಿನ್ನಾ
ಯುವನು ಬಲ್ಲವರುಂಟೆ ರಕ್ಷಿಸು ನಮ್ಮನನವರತ || ೩೫ ||
ಇಳೆಗೆ ಪತಿಯಾದವನು ಯಾದವ ರೊಳಗೆ ಬಾಂಧವ ನಿನಗೆ ಸೋದರ
ದಳಿಯನಾದಭಿಮನ್ಯುವನು ಕೊಲ್ಲಿಸಿದೆ ಕೊಳಗುಳದಿ ||
ಅಳಲಿನಬುಧಿಯಳದ್ವಿತಂಗಿಯ ಬಳಲಿಸಿದೆ ಕುಲಗೋತ್ರ ಬಾಂಧವ
ರೊಳಗೆ ಕೀರ್ತಿಯ ಪಡೆದೆ ರಕ್ಷಿಸು ನಮ್ಮನನವರತ || ೩೬ ||
ತಾಯನಗಲಿದ ತನಯನೀ ರಾ ಧೇಯನೊಳು ರಹಸ್ಯದಲಿ ಕುಲ
ತಾಯವನು ನೆರೆ ತಿಳುಹಿ ಅರ್ಜುನನಿಂದ ಕೊಲ್ಲಿಸಿದೆ ||
ಮಾಯಾಮಂತ್ರದ ಕುಟಿಲಗುಣದ ನ್ಯಾಯವೋ ಇದನ್ಯಾಯವೋ ನೀ
ನ್ಯಾಯವನು ನೀ ಬಲ್ಲೆ ರಕ್ಷಿಸು ನಮ್ಮನನವರತ || ೩೭ ||
ಕೊಲ್ಲುಬಗೆದವನಾಗಿ ನೀ ಹಗೆ ಯಲ್ಲಿಸಖ್ಯವ ಬೆಳೆಸದು ಹಿತ
ವಲ್ಲ ನಿನ್ನಯ ಗುಣವ ಬಲ್ಲವರಿಗೆ ಯದುಕುಲದಿ ||
ಗೊಲ್ಲನಾರಿಯರೊಳು ಪ್ರವರ್ತಕ ನಲ್ಲವೇ ಭಾವಿಸಲು ಲೋಕದೊ
ಳೆಲ್ಲರೂ ಸರಿ ನಿನಗೆ ರಕ್ಷಿಸು ನಮ್ಮನನವರತ || ೩೮ ||
ಮಗನ ಕೊಂದವನಾಳುವಂತಾ ಸುಗುಣೆಯರು ಹದಿನಾರು ಸಾವಿರ
ಸೊಗಸುಗಾತಿಯವರ ಮೋಹದ ಬಲೆಗೆ ವಿಟನಾಗಿ ||
ಬಗೆಬಗೆಯ ರತಿಕಲೆಗಳಲಿ ಕೂ ರುಗರ ನಾಟಿಸಿ ಮೆರೆದು ನೀನಿ
ಜಗಕೆ ಪಾವನನಾದೆ ರಕ್ಷಿಸು ನಮ್ಮನನವರತ || ೩೯ ||
ಏನು ಮಾಡಿದರೇನು ಕರ್ಮವ ನೀನೊಲಿಯದಿನ್ನಿ ದಿಲ್ಲದಕನು
ಮಾನವುಂಟೇ ಭ್ರಮರಕೀಟನ್ಯಾಯದಂದಲಿ ||
ನೀನೊಲಿಯೆ ತೃಣ ಪರ್ವತವು ಪುಸಿ ಯೇನು ನೀ ಪತಿಕರಿಸೆ ಬಳಿಕಿ
ನ್ನೇನು ಚಿಂತಿಸಲೇಕೆ ರಕ್ಷಿಸು ನಮ್ಮನನವರತ || ೪೦ ||

ಎಷ್ಟು ಮಾಡಲು ಮುನ್ನತಾ ಪಡ ದಷ್ಟು ಎಂಬುದು ಲೋಕದೊಳುಮತಿ
ಗೆಟ್ಟ ಮಾನವರಾಡುತಿಹರಾಮಾತದಂತಿರಲಿ ||
ಪಟ್ಟವಾರಿಂದಾಯ್ತು ಧ್ರುವನಿಗೆ ಕೊಟ್ಟ ವರ ತಪ್ಪಿತೇ ಕುಚೇಲನೀ
ಗಿಷ್ಟ ಬಾಂಧವ ನೀನು ರಕ್ಷಿಸು ನಮ್ಮನನವರತ || ೪೧ ||
ತನ್ನ ದೇಹಾತುರದೊಳಡವಿಯೊ ಳನ್ಯರನು ಸಂಹರಿಸುತಿರುತಿರೆ
ನಿನ್ನ ನಾಮದೊಳಧಿಕವೆರಡಕ್ಷರವ ಬಣ್ಣಿಸುತ ||
ಧನ್ಯನಾದನೆ ಮುನಿಕುಲದಿ ಸಂ ಪನ್ನನಾದನು ನೀನೊಲಿದ ಬಳಿ
ಕಿನ್ನು ಪಾತಕವುಂಡೆ ರಕ್ಷಿಸು ನಮ್ಮನನವರತ || ೪೨ ||
ನಿನ್ನ ಸತಿಗಳುಕಿದ ದುರಾತ್ಮನ ಬೆನ್ನಿನಲಿ ಬಂದವನ ಕರುಣದಿ
ಮನ್ನಿಸಿದ ಕಾರನ ದಯಾಪರಾಮೂರ್ತಿ ಎಂದೆನುತ ||
ನಿನ್ನ ಭಜಿಸಿದ ಸಾರ್ವಭೌಮರಿ ಗಿನ್ನು ಇಹಪರವುಂಟು ಸದ್ಗುಣ
ರನ್ನ ಸಿರಿಸಂಪನ್ನ ರಕ್ಷಿಸು ನಮ್ಮನನವರತ || ೪೩ ||
ವೀರರಾವಣನೊಡನೆ ಹೋರಿದ ವೀರರಗ್ಗದ ಕಪಿಗಳವರೊಳು
ಮಾರುತ ನವನಿಗೇನು ಧನ್ಯನೋ ಬ್ರಹ್ಮಪಟ್ಟದಲಿ ||
ಸೇರಿಸಿದ ನಿನ್ನಂತೆ ಕೊಡುವ ಉ ದಾರಿಯಾವನು ತ್ರಿಜಗದೊಳಗಾ
ಕಾರಣದಿ ನಂಬಿದೆನು ರಕ್ಷಿಸು ನಮ್ಮನನವರತ || ೪೪ ||
ಶಿವಶಿವಾ ನೀ ಮಾಡಿದುಪಕಾ ರವನು ಮರೆತವರುಂಟೆ ಪಾಪದಿ
ನವೆದಳಾಮಿಳಗೊಲಿದ ಪ್ರಾಣವಿಯೊಗಕಾಲದಲಿ ||
ಆವನವರ ಕೈಗೊಪ್ಪಿಸದೆ ಕಾಯ್ದವನು ಮಿಕ್ಕಾ
ದವರಿಗುಂಟೇ ಕರುಣ ರಕ್ಷಿಸು ನಮ್ಮನನವರತ || ೪೫ ||
ಹೆತ್ತಮಗಳು ಮದುವೆಯಾದವ ನುತ್ತಮನು ಗುರುಪತ್ನಿಗಳುಪಿದ
ಚಿತ್ತಜನು ಮಾವನ ಕೃತಘ್ನನು ನಿನಗೆ ಮೈದುನನು ||
ಹೊತ್ತು ತಪ್ಪಿಸಿ ಕಾಮದಲಿ ಮುನಿ ಪೋತ್ತಮನ ಮಡದಿಯನು ನೆರೆದವ
ಗಿತ್ತೆ ಕೈವಲ್ಯವನ್ನು ರಕ್ಷಿಸು ನಮ್ಮನನವರತ || ೪೬ ||
ಇಲ್ಲಿಹನು ಅಲ್ಲಿಲ್ಲವೆಂಬೀ ಸೊಲ್ಲು ಸಲ್ಲದು ಹೊರಗೊಳಗೆ ನೀ
ಇಲ್ಲದಿಲ್ಲನ್ಯತ್ರವೆಂಬುದನೆಲ್ಲ ಕೆಲಕೆಲರು ||
ಬಲ್ಲರಿಳೆಯೊಳು ಭಾಗವತರಾ ದೆಲ್ಲರಿಗೆ ವಂದಿಸಿದ ಕುಜನರಿ
ಗಿಲ್ಲ ಸದ್ಗತಿ ನೋಡಿ ರಕ್ಷಿಸು ನಮ್ಮನನವರತ || ೪೭ ||
ಸಿರಿ ಸಂಪತ್ತಿನಲಿ ನೀ ಮೈ ಮರೆದು ಮದಗರ್ವದಲಿ ದೀನರ
ಕರುಣದಿಂದೀಕ್ಷಿಸದೆ ಕಡೆಗಣ್ಣಿಂದ ನೋಡುವರೇ ||
ಹರಹರ ಅನಾಥರನು ಪಾಲಿಸಿ ಕೊಡುವ ಉದಾರಯೆಂಬೀ
ಬಿರುದ ಬಿಡುವರೆ ತಂದೆ ರಕ್ಷಿಸು ನಮ್ಮನನವರತ || ೪೮ ||
ದೀನ ನಾನು ಸಮಸ್ತ ಲೋಕಕೆ ದಾನಿ ನೀನು ವಿಚಾರಿಸಲು ಮತಿ
ಹೀನ ನಾನು ಮಹಾಮಹಿಮ ಕೈವಲ್ಯಪತಿ ನೀನು ||
ಏನು ಬಲ್ಲೆನು ನಾನು ನೆರೆ ಸುಜ್ಞಾನಮೂರುತಿ ನೀನು ನಿನ್ನ ಸ
ಮಾನರುಂಟೇ ದೇವ ರಕ್ಷಿಸು ನಮ್ಮನನವರತ || ೪೯ ||
ತರಳತನದಲ ಕೆಲವು ದಿನ ದುರು ಭರದ ಗರ್ವದಿ ಕೆಲವು ದಿನ ಮೈ
ಮರೆದು ನಿಮ್ಮಡಿಗೆರಗದಾದೆನು ವಿಷಯಕೇಳಿಯಲಿ ||
ನರಕಭಾಜನನಾಗಿ ಕಾಮಾ ತುರದಿ ಪರಧನ ಪರಸತಿಗೆ ಮನ
ಹರಿದ ಪಾಪವ ಕಳೆದು ರಕ್ಷಿಸು ನಮ್ಮನನವರತ || ೫೦ ||

ಮರೆದನಭ್ಯುದಯಲಿ ನಿಮ್ಮನು  ಮರೆಯೆನಾಪತ್ತಿನಲಿ ಹರಿಯೆಂ
ದೊರೆಯುವೆನು ಮನವೇಕಭಾವದೊಳಿಲ್ಲ ನಿಮ್ಮಡಿಯ ||
ಮರೆದು ಬಾಹಿರನಾದವ ನೀ  ಮರೆವರೇ ಹಸು ತನ್ನ ಕಂದನ
ಮರೆವುದೇ ಮಮತೆಯಲಿ ರಕ್ಷಿಸು ನಮ್ಮನನವರತ || ೫೧ ||
ದಾರುಣಿಗೆ ವರಚಕ್ರವರ್ತಿಗಳಾರುಮಂದಿ ನೃಪಾಲಕರು ಹದಿ
ನಾರಮಂದಿಯು ಧರಣಿಯನು ಮುನ್ನಾಳ್ದನೃಪರೆನಿತೋ ||
ವೀರರನು ಮೆಚ್ಚಿದಳೆ ಧರಣೀ  ನಾರಿ ಬಹು ಮೋದದೊಳು ನಿನ್ನನು
ಸೇರಿ ಒಲೈಸುವಳು ರಕ್ಷಿಸು ನಮ್ಮನನವರತ || ೫೨ ||
ಭಾರಕರ್ತನು ನೀನು ಬಹು ಸಂ  ಸಾರಿಯೆಂಬುದು ನಿಗಮತತಿ ಕೈ
ವಾರಿಸುತಿದೆ ದಿವಿಜ ಮನುಜ ಭುಜಂಗರೊಳಗಿನ್ನು ||
ಆರಿಗುಂಟು ಸ್ವತಂತ್ರ ನಿನ್ನಂ  ತಾರು ಮುಕ್ತಿಯನೀವ ಸದ್ಗುರು
ವಾರು ಜಗದಧ್ಯಕ್ಷ ರಕ್ಷಿಸು ನಮ್ಮನನವರತ || ೫೩ ||
ಗತಿವಿಹೀನರಿಗಾರು ನೀನೇ  ಗತಿಕಣಾ ಪತಿಕರಿಸಿ ಕೊಡುಸ
ದ್ಗತಿಯ ನೀನೆಲೆ ದೇವ ನಿನಗಪರಾಧಿ ನಾನಲ್ಲ ||
ಶ್ರುತಿವಚನವಾಡುವುದು ಶರಣಾಗತರ ಸೇವಕನೆಂದು ನಿನ್ನನು
ಮತಿವಿಡಿದು ನಂಬಿದೆನು ರಕ್ಷಿಸು ನಮ್ಮನನವರತ || ೫೪ ||
ಈಗಲೋ ಈ ದೇಹವಿನ್ನಾ  ವಾಗಲೋ ನಿಜವಿಲ್ಲವೆಂಬುದ
ನೀಗ ತಿಳಿಯದೆ ಮಡದಿ ಮನೆ ಮನೆವಾರ್ತೆ ಎಂದೆಂಬ ||
ರಾಗಲೋಭದಿ ಮುಳುಗಿ ಮುಂದಣ  ತಾಗು ಬಾಗುಗಳರಿಯೆ ನಿನ್ನ ಸ
ಮಾಗಮವ ಬಯಸುವೆನು ರಕ್ಷಿಸು ನಮ್ಮನನವರತ || ೫೫ ||
ಮಾಂಸ ರಕ್ತದ ಮಡುವಿನಲ್ಲಿ  ನವಮಾಸ ಜನನಿಯ ಜಠರದೊಳಗಿರು
ವಾ ಸಮಯದಲಿ ವೃತ್ತಿಯನು ಕಲ್ಪಿಸಿದ ಪ್ರಭುವಾರು ||
ನೀ ಸಲಹಿದವನಲ್ಲವೇ ಕರುಣಾ ಸಮುದ್ರನು ನೀನಿರಲು ಕಮ
ಲಾಸನನ ಹಂಗೇಕೆ ರಕ್ಷಿಸು ನಮ್ಮನನವರತ || ೫೬ ||
ಬಲು ಮೃಗ ಮರವು ಪಕ್ಷಿ ಕೀಟಕ  ಜಲಷರೌಷಧಿ ಜನಿಸಿದೆನು ಕೋ
ಖಲೆಗೊಳಿಸಬೇಡಕಟ ಮಾನವನಾದ ಬಳಿಕಿನ್ನು ||
ಕೊಲಿಸದಿರು ಯಮನಿಂದ ಮುರಚದ  ಒಲಿದು ನಿನ್ನನು ಭಜಿಸುವವರಿಗೆ
ಕೊಲೆಗೆ ಕಾರಣವೇನು ರಕ್ಷಿಸು ನಮ್ಮನನವರತ || ೫೭ ||
ಪಂಚಭೂತದ ಕಾಯದೊಳು ನೀ  ವಂಚಿಸದೆ ಇರುತಿರಲು ಪೂರ್ವದ
ಸಂಚಿತದ ಫಲವೆನ್ನಲೇಕಿದು ಮರುಳುತನದಿಂದ ||
ಮಿಂಚಿದವರಿನ್ನುಂಟೆ ತಿಳಿಯೆ ಪ್ರ  ಪಂಚವೆಲ್ಲಕೆ ತಪ್ಪಿದವನೀ
ಕೊಂಚಗಾರನೆ ಕೃಷ್ಣ ರಕ್ಷಿಸು ನಮ್ಮನನವರತ || ೫೮ ||
ಹಲವು ಕರ್ಮಗಳಿಂದ ಮೂತ್ರದ  ಬಲಗಳಲಿ ಸಂಚರಿಸಿ ಪದವಿಯ
ಫಲ ಕಾಣದೆ ಹೊಲವು ತಪ್ಪಿದೆನೆನ್ನ ದೇಹದಲಿ ||
ಒಲಿದು ನೀನಿರೆ ನಿನ್ನ ಸಲುಗೆಯ ಒಲುಮೆಯಲಿ ಬರಸೆಳೆವ ಮುಕುತಿಯ
ಲಲನೆಯನೆ ತಳುವಿಲ್ಲ ರಕ್ಚಿಸು ನಮ್ಮನನವರತ || ೫೯ ||
ಎತ್ತಿದೆನು ನಾನಾ ಶರೀರವ  ಹೊತ್ತಲಿಸಿದೆನು ಸಲೆ ಬೇ
ಸತ್ತು ನಿನ್ನಯ ಪದವ ಕಾಣದೆ ತೊಳಲಿಬಳಲಿದೆನು ||
ಸತ್ತು ಹುಟ್ಟುವ ಹುಟ್ಟೆ ಹಿಂಗುವ  ಸತ್ತ ತೊಡಕನು ಮಾಣಿಸಲೆ ಪುರು
ಷೋತ್ತಮನೆ ಮನವೊಲಿದು ರಕ್ಷಿಸು ನಮ್ಮನನವರತ || ೬೦ ||

ಇಂದು ಈ ಜನ್ಮದಲಿ ನೀನೇ  ಬಂಧು ಹಿಂದಣ ಜನ್ಮದಲಿ ಬಳಿ
ಸಂದು ಮುಂದಣ ಜನ್ಮಕಧಿಪತಿಯಾಗಿ ಇರುತಿರಲು ||
ಎಂದಿಗೂ ತನಗಿಲ್ಲ ತನಸಂ  ಬಂಧ ನಿನ್ನದು ಎನಗೆ ನೀ ಗತಿ
ಯೆಂದು ಬಿನ್ನೈಸಿದೆನು ರಕ್ಷಿಸು ನಮ್ಮನನವರತ || ೬೧ ||
ಗಣನೆಯಿಲ್ಲದ ಜನನಿಯರ ಮೊಲೆ  ಯುಣಿಸಲಾಪಯಬಿಂದುಗಳನದ
ನೆಣಿಸಲಳವೇ ಸಪ್ತಸಾಗರಕಧಿಕವೆನಿಸುವುದು ||
ಬಣಗು ಕಮಲಜನದಕೆ ತಾನೇ  ಮಣೆಯಗಾರನು ಈತ ಮಾಡಿದ
ಕುಣಿಕೆಗಳ ನೀ ಬಿಡಿಸಿ ರಕ್ಷಿಸು ನಮ್ಮನನವರತ || ೬೨ ||
ಲೇಸಕಾಣೆನು ಜನನ ಮರಣದಿ ಘಾಸಿಯಾದೆನು ನೊಂದೆನಕಟಾ
ಲೇಸೆನಿಸಿ ನೋಡಲು ಪರಾಪರವಸ್ತು ನೀನಾಗಿ ||
ನೀ ಸಲಹುವವನಲ್ಲವೇ ಕರುಣಾ ಸಮುದ್ರನು ನೀನಿರಲು ಕಮ
ಲಾಸನನ ಹಂಗೇನು ರಕ್ಷಿಸು ನಮ್ಮನನವರತ || ೬೩ ||
ಕಾಪುರುಷರೈದಾರುಮಂದಿ ಸ  ಮೀಪದಲಿ ಕಾಡುವರು ಎನ್ನನು
ನೀ ಪರಾಮರಿಸದೆ ಪರಾಕಾಗಿಹುದು ಲೇಸಲ್ಲ ||
ಶ್ರೀಪದಾಬ್ಜದ ಸೇವೆಯಲಿ ನೆರೆ ಪಾಪವನು ಪರಿಹರಿಸೇ ನೀ ನಿಜ
ರೂಪಿನಲಿ ಬಂದೊಳಿದು ರಕ್ಷಿಸು ನಮ್ಮನನವರತ || ೬೪ ||
ಐದು ತತ್ವಗಳಾದವೊಂದಕ್ಕೈದು ಕಡೆಯಲಿ ತತ್ವವಿಪ್ಪ
ತ್ತೈದು ಕೂಡಿದ ತನುಳನಲಿ ವಂಚಿಸದೆ ನೀನಿರಲು ||
ಭೇದಿಸದೆ ಜೀವಾತ್ಮ ತಾ ಸಂ  ಪಾದಿಸಿದ ಸಂಚಿತ ಸುಕರ್ಮವ
ನಾದರಸಿ ಕೈಕೊಂಡು ರಕ್ಷಿಸು ನಮ್ಮನನವರತ || ೬೫ ||
ಎಂಟುಗೇಣಿನ ದೇಹ ರೋಮಗಳೆಂಟುಕೋಟಿಯು ಕೀಲ್ಗಳರವ
ತ್ತೆಂಟು ಮಾಂಸಗಳಿಂದ ಮಾಡಿದ ಮನವೊಲಿದು ||
ನೆಂಟ ನೀನಿರ್ದಗಲಿದಡೆ ಒಣ  ಹೆಂಟೆಯಲಿ ಮುಚ್ಚುವರು ದೇಹದ
ಲುಂಟೆ ಫಲ ಪುರುಷಾರ್ಥ ರಕ್ಷಿಸು ನಮ್ಮನನವರತ || ೬೬ ||
ಸ್ನಾನಸಂಧ್ಯಾಧ್ಯಾನಜಪತಪ  ದಾನ ಧರ್ಮ ಪರೋಪಕಾರ ನ
ಹೀನಕರ್ಮದೊಳುಲಿವನಲ್ಲದೆ ಬೇರೆ ಗತಿಯುಂಟೆ ||
ಏನು ಮಾಡಿದರೇನು ಮುಕ್ತಿಜ್ಞಾನವಿಲ್ಲದಡಿಲ್ಲ ಭಕ್ತಿಗೆ
ನೀನೆ ಕಾರಣನಾಗಿ ರಕ್ಷಿಸು ನಮ್ಮನನವರತ || ೬೭ ||
ಕೋಪವೆಂಬುದು ತನುವಿರಲಿ ನೆರೆ  ಪಾಪ ಪಾತಕದಿಂದ ನರಕದ
ಕೂಪದಲಿ ಮುಳುಗುವುದು ತಪ್ಪದು ಶಾಸ್ತ್ರಸಿದ್ಧವಲೇ ||
ರಾಪುಮಾಡದೆ ಬಿಡನು ಯಮನು ನಿ  ರಪರಾಧಿಯ ನೋಡಿ ಕೀರ್ತಿಕ
ಲಾಪವನು ನೀ ಕಾಯ್ದು ರಕ್ಷಿಸು ನಮ್ಮನನವರತ || ೬೮ ||
ನಿನ್ನ ಸೂತ್ರದೊಳಾಡುವವು ಚೈ  ತನ್ಯ ಸಚರಾಚರಗಳೆಲ್ಲವು
ನಿನ್ನ ಸೂತ್ರವು ತಪ್ಪಿದರೆ ಮೊಗ್ಗುಪವು ಹೂಹೆಗಳು ||
ಇನ್ನು ನಮಗೆ ಸ್ವತಂತ್ರವೆಲ್ಲಿಯ  ದನ್ಯ ಕರ್ಮಸುಕರ್ಮವೆಲ್ಲವು
ನಿನ್ನದೆಂದೊಪ್ಪಿಸಿದೆ ರಕ್ಷಿಸು ನಮ್ಮನನವರತ || ೬೯ ||
ಒಡೆಯ ನೀನೆಂದರಿತು ನಾ ನೀ  ನಿಮ್ಮಡಿಯ ಭಜಿಸದೆ ದುರುಳನಾದೆನು
ಮಡದಿ ಮಕ್ಕಳ ಮೋಹದಲಿ ಮನ ಸಿಲುಕಿತಡಿಗಡಿಗೆ ||
ಮಡದಿಯಾರೀ ಮಕ್ಕಳಾರೀ  ಒಡಲಿಗೊಡೆಯನು ನೀನು ನೀ ಕೈ
ಪಿಡಿದು ಮುದದಲಿ ಬಿಡದೆ ರಕ್ಷಿಸು ನಮ್ಮನನವರತ || ೭೦ ||

ವಂಟಿಸಿದ ಮುದಮುಖರು ಕೆಲಗಲ ರುಂಟು ರಿಪುಗಳು ದಂಟಿಸುತ ಬಲು
ಕಂಟಕದಿ ಕಾಡುವರು ಕಾಯ್ವೆ ಕಲುಷಸಂಹಾರ ||
ಬಂಟನಲ್ಲವೆ ನಾನು ದೀನರ ನೆಂಟನಲ್ಲವೆ ನೀನು ನಿನ್ನೊಳ
ಗುಂಟೆ ನಿರ್ದಯ ನೋಡಿ ರಕ್ಷಿಸು ನಮ್ಮನನವರತ || ೭೧ ||
ದಂಡಧರನುಪಟಲದಿ ಮಿಗೆ ಮುಂ ಕೊಂಡು ಮೊರೆಯಾಗುವವರ ಕಾಣೆನು
ಪುಂಡರೀಕೋದ್ಭವನ ಶಿರವನು ಕಡಿದು ತುಂಡರಿಸಿದ ||
ಖಂಡಪರಶವು ರುದ್ರಭೂಮಿಯೊ ಳಂಡಲೆದು ತಿರುಗುವನು ನೀನು
ದ್ವಂಡ ದೇವರದೇವ ರಕ್ಷಿಸು ನಮ್ಮನನವರತ || ೭೨ ||
ಶಕ್ತಿಯೆಂಬುದು ಮಾಯೆ ಮಾಯಾ ಶಕ್ತಿಯದು ತನುವಿನಲಿ ನೀ ನಿಜ
ಮುಕ್ತಿದಾಯಕನಿರಲು ಸುಖದುಃಖಾದಿಗಳಿಗಾರು ||
ಯುಕ್ತಿಯೊಳಗಿದನರಿತು ಮನದಿ ವಿ ರಕ್ತಿಯಲಿ ಭಜಿಸುವಗೆ ಮುಕ್ತಿಗೆ
ಭಕ್ತಿಯೇ ಕಾರಣವು ರಕ್ಷಿಸು ನಮ್ಮನನವರತ || ೭೩ ||
ಮೂರುಗುಣ ಮೊಳೆದೋರಿತದರೊಳು ಮೂರು ಮೂರ್ತಿಗಳಾಗಿ
ರಂಜಿಸಿ ತೋರಿ ಸೃಷ್ಟಿಸ್ಥಿತಿಲಯಂಗಳ ರಚಿಸಿ ವಿಲಯದಲಿ ||
ಮೂರು ರೂಪೊಂದಾಗಿ ಪ್ರಳಯದ ವಾರಿಯಲಿ ವಟಪತ್ರಶಯನದಿ
ಸೇರಿದವ ನೀನೀಗ ರಕ್ಷಿಸು ನಮ್ಮನನವರತ || ೭೪ ||
ನೀರಮೇಲಣ ಗುಳ್ಳೆಯಂದದಿ ತೋರಿಯಡಗುವ ದೇಹದೀ ಸಂ
ಸಾರ ಬಹಳಾರ್ಣವದೊಳಗೆ ಮುಳುಗಿದೆನು ಪತಿಕರಿಸಿ ||
ತೋರಿಸಚಲಾನಂದಪದವಿಯ ಸೇರಿಸಕಟಾ ನಿನ್ನ ವೋಲ್ನಮ
ಗಿನ್ನಾರು ಬಾಂಧವರುಂಟು ರಕ್ಷಿಸು ನಮ್ಮನನವರತ || ೭೫ ||
ಹೊದ್ದಿ ನಿಲುವುದೆ ದರ್ಪಣದ ಮೇ ಲುದ್ದುರುಳಿ ಬೀಳ್ವಂತೆ ನಿಮಿಷದಿ
ಬಿದ್ದುಹೋಗುವ ಕಾಯವೀ ತನುವೆಂಬ ಪಾಶದಲಿ ||
ಬದ್ಧನಾದೆನು ಮಮತೆಯಲಿ ನೀ ನಿದ್ದುದಕೆ ಫಲವೇನು ಭಕ್ತವಿ
ರುದ್ಧವಾಗದಪೋಲು ರಕ್ಷಿಸು ನಮ್ಮನನವರತ || ೭೬ ||
ಕೇಳುವುದು ಕಡುಕಷ್ಟ ಕಷ್ಟದ ಬಾಳುವೆಯ ಬದುಕೇನು ಸುಡುಸುಡು
ಗಾಳಿಗೊಡ್ಡಿದ ಸೊಡರು ಈ ಸಂಸಾರದೇಳಿಗೆಯು ||
ಬಾಳಬೇಕೆಂಬವಗೆ ನೆರೆ ನೀ ಮ್ಮಾಳಿಗವ ಮಿಗೆ ಮಾಡಿ ಭಕ್ತಿಯೊ
ಳಾಳಿ ಬದುಕುವುದುಚಿತ ರಕ್ಷಿಸು ನಮ್ಮನನವರತ || ೭೭ ||
ದೇಹಧಾರಕನಾಗಿ ಬಹುವಿಧ ಮೋಹದೇಳಿಗೆಯಾಗಿ ಮುಕುತಿಗೆ
ಬಾಹಿರನು ವಿಷಯಾದಿಗಳಿಗೊಳಗಾಗಿ ||
ದೇಹವೀ ಸಂಸಾರವೆನ್ನದೆ ಮೋಹಿಸುವ ಮತಿಗೇಡಿ ಮಾನವ
ಸಾಹಸಿಯೆ ಸಟೆಮಾತು ರಕ್ಷಿಸು ನಮ್ಮನನವರತ || ೭೮ ||
ಅಳಿವ ಒಡಲನು ನೆಚ್ಚಿವಿಷಯಂ ಗಳಿಗೆ ಕಾತುರನಾಗಿ ಮಿಗೆ ಕಳ
ವಳಿಸಿ ಕಾಲನ ಬಳಿಗೆ ಹಂಗಿಗನಾಗಿ ಬಾಳುವರೆ ||
ತಿಳಿದು ಮನದೊಳು ನಿನ್ನ ನಾಮಾವಳಿಯ ಜಿಹ್ವೆಗೆ ತಂದುಪಾಪವ
ಕಳೆದ ಬದುಕೇ ಲೇಸು ರಕ್ಷಿಸು ನಮ್ಮನನವರತ || ೭೯ ||
ವರುಷ ನೂರಾಯುಷ್ಯವದರೊಳ ಗಿರುಳು ಕಳೆದೈವತ್ತು ಐವ
ತ್ತರಲಿ ವಾರ್ಧಿಕ ಬಾಲ್ಯ ಕೌಮಾರದಲಿ ಮೂವತ್ತು ||
ಇರದೆ ಸಂದದು ಬಳಿಕ ಇಪ್ಪ ತ್ವರುಷವದರೊಳಗಾದುದಂತಃ
ಕರಣ ನಿನ್ನೊಳು ತೋರಿ ರಕ್ಷಿಸು ನಮ್ಮನನವರತ || ೮೦ ||

ಊರು ತನಗೊಂದಿಲ್ಲ ಹೊತ್ತ ಶ ರೀರಗಳ ಮಿತಿಯಿಲ್ಲ ತಾ ಸಂ
ಸಚ್ಚಾರಿಸ್ಥ ದಳವಿಲ್ಲ ನುಡಿಯದ ಭಾಷೆಮತ್ತಿಲ್ಲ ||
ಬೇರೆ ಹೊಸತೊಂದಿಲ್ಲ ಉಣ್ಣದ ಸಾರವಸ್ತುಗಳಿಯತನು ಸಂ
ಚಾರವೀ ಬಗೆಯಾಯ್ತು ರಕ್ಷಿಸು ನಮ್ಮನನವರತ || ೮೧ ||
ಗೋಪುರದ ಭಾರವನು ಗಾರೆಯ ರೂಪದೋರಿದ ಪ್ರತಿಮೆಯಂದದೋ
ಳೀಪರಿಯ ಸಂಸಾರಭಾರವನಾರು ತಾಳುವರು ||
ತಾ ಪರಾಕ್ರಮಿಯೆಂದು ಮನುಜನು ಕಾಪಥವನೈದುವನು ವಿಶ್ವ
ವ್ಯಾಪಕನು ನೀನಹುದು ರಕ್ಷಿಸು ನಮ್ಮನನವರತ || ೮೨ ||
ಬೀಜವೃಕ್ಷದೊಳಾಯ್ತು ವೃಕ್ಷಕೆ ಬೀಜವಾರಿಂದಾಯ್ತು ಲೋಕದಿ
ಬೀಜವೃಕ್ಷ ನ್ಯಾಯವಿದ ಭೇದಿಸುವರಾರಿನ್ನು ||
ಸೋಸಿಗವ ನೀ ಬಲ್ಲೆ ನಿನ್ನೊಳು ರಾಜಿಸುತ ಮೊಳೆದೋರುವದು ಸುರ
ರಾಜನಂದನನಮಿತ ರಕ್ಷಿಸು ನಮ್ಮನನವರತ || ೮೩ ||
ತೊಗಲು ಬೊಂಬೆಗಳಂತೆ ನಾಲಕು ಬಗೆಯ ನಿರ್ಮ್ಮಾಣದಲಿ ಇದರೊಳು
ನೆಗಳದೀ ಚೌಷಷ್ಟಿ ಲಕ್ಷಣ ಜಾತಿಧರ್ಮ್ಮದಲಿ ||
ಬಗೆಬಗೆಯ ನಾಮಾಂಕಿತದ ಜೀ ವಿಗಳದೆಲ್ಲವು ನಿನ್ನ ನಾಮದಿ
ಜಗಕೆ ತೋರುತ್ತಿಹುದು ರಕ್ಷಿಸು ನಮ್ಮನನವರತ || ೮೪ ||
ಹೂಡಿದೆಲು ಮರಮುಟ್ಟು ಮಾಂಸದ ಗೋಡೆ ಚರ್ಮದ ಹೊದಿಕೆ ನರವಿನ
ಕೂಡೆ ಹಿಂಡಿಗೆ ಬಿಗಿದ ಮನೆಯೊಳಾತ್ಮ ನೀನಿರಲು ||
ಬೀಡು ತೊಲಗಿದ ಬಳಿಕಲಾ ಸುಡು ಗಾಳಿನಲಿ ಬೆಂದುರಿವ ಕೊಂಪೆಯ
ನೋಡಿ ನಂಬಿರಬಹುದೆ ರಕ್ಷಿಸು ನಮ್ಮನನವರತ || ೮೫ ||
ಬೀಗಮುದ್ರೆಗಳಿಲ್ಲದೂರಿಗೆ ಬಾಗಿಲುಗಳೊಂಬತ್ತು ಹಗಲಿರು
ಳಾಗಿ ಮುಚ್ಚದೆ ತೆರದಿಹುದು ಜೀವಾತ್ಮ ತಾನಿರುತ ||
ನೀಗಿ ಎಲ್ಲವ ಬಿಸುಟ್ಟು ಬೇಗದಿ ಹೋಗುತಿಹ ಸಮಯದಲಿ ಇರುವ
ರಾಗಬಲ್ಲರೆ ನೀನೆ ರಕ್ಷಿಸು ನಮ್ಮನನವರತ || ೮೬ ||
ಕೀಲು ಬಿಲಿದಿಹದೈದು ತಿರುಗುವ ಗಾಲಿಯರಡರ ರಥಕೆ ತ್ರೈಗುಣ
ಶೀಲನೋರ್ವನು ಸಂಚರಿಸುತಿಹನಾ ರಥಾಗ್ರಹದಲಿ ||
ಕೀಲು ಕಡೆಗೊಂದೂಡಿ ಬೀಳಲು ಕಾಲಗತಿ ತಪ್ಪುವುದು ಅದರನು
ಕೂಲ ನಿನ್ನೊಳಗಿಹುದು ರಕ್ಷಿಸು ನಮ್ಮನನವರತ || ೮೭ ||
ಬಿಗಿದ ರಕುತದ ರೋಮಕೂಪದ ತೊಗಲ ಕೋಟೆಯ ನಂಬಿ ರೋಗಾ
ದಿಗಳ ಮುತ್ತಿಗೆ ಬಲಿದು ಜೀವನ ಪಿಡಿಯಲನುವಾಯ್ತು ||
ವಿಗಡ ಯಮನಾಳು ಬರುತಿರೆ ತೆಗೆದು ಕಾಲನ ಬಲವ ಬಲು ಮು
ತ್ತಿಗೆಯನಿದ ಪರಿಹರಿಸಿ ರಕ್ಷಿಸು ನಮ್ಮನನವರತ || ೮೮ ||
ವಾರುಣಗಳೆಂಟೆಸೆವ ನಗರಕೆ ದ್ವಾರವೊಂಬತ್ತವಕೆ ಬಲು ಮೊನೆ
ಗಾರರಾದಾಳುಗಳ ಕಾವಲುಗಾರರನು ಮಾಡಿ ||
ಆರರಿಯದಂತರೊಳಗೆ ಹೃದ ಯಾರವಿಂದದಿ ನೀನಿರಲು ಬರಿ
ದೂರ ನಿನಗುಂಟೆ ರಕ್ಷಿಸು ನಮ್ಮನನವರತ || ೮೯ ||
ಪೇಳಲಿನ್ನಳವಲ್ಲವೀಗೆಮ ನಾಳುಗಳು ನೆರೆಯಂಗದೇಶವ
ಧಾಳಿಮಾಡುವರಕಟಕಟ ಸೆರೆ ಸೂರೆಗಳ ಪಿಡಿದು ||
ಕಾಳುಮಾಡುವರಿನ್ನು ತನುವಿದು ಬಾಳಲರಿಯದು ಕೋಟೆಯವರಿಗೆ
ಕೋಳುಹೋಗದ ಮುನ್ನ ರಕ್ಷಿಸು ನಮ್ಮನನವರತ || ೯೦ ||

ನಾಲಿಗೆಯು ನಾಸಿಕವು ನಯನ  ಕಪಾಲ ಪದ ಪಾಣಿಗಳ ತನುವಿನ
ಮೂಲಕರ್ತವಿನಲಿ ಪರಿಚಾರಕರು ತಾವಾಗಿ ||
ಲೀಲೆಯಿಂದಿರುತಿರ್ದ ಕಡೆಯಲಿ  ಕಾಲ ತೀರಿದ ಬಳಿಕಲದರನು
ಕೂಲ ನಿನ್ನೊಳಗಿಹುದು ರಕ್ಷಿಸು ನಮ್ಮನನವರತ || ೯೧ ||
ಸತ್ತವರಿಗಲಲೇಕೆ ತನ್ನನು ಹೊತ್ತವರು ಹೆತ್ತವಗುಗಳು ತಾ
ಸತ್ತು ಹೋಗುವರಲ್ಲದುಳಿದವರೆ ಮರುಗಲೇಕಿನ್ನು ||
ಮೃತ್ಯು ಬೆನ್ನಿನೊಲಿಹುದು ತಾವಿ  ನ್ನತ್ತು ಮಾಡುವುದೇನು ಪೂರ್ವದ
ತೆತ್ತಿಗನು ನೀನೀಗ ರಕ್ಷಿಸು ನಮ್ಮನನವರತ || ೯೨ ||
ಮಣ್ಣು ಮಣ್ಣಿನೊಳುದಿಸಿರಲು  ಮಣ್ಣು ಗೊಂಬೆಗಳಾಗಿ ರಂಜಿಸಿ
ಮಣ್ಣಿನಾಹಾರದಲಿ ಜೀವವ ಹೊರೆದು ಉಪಚರಿಸಿ ||
ಮಣ್ಣಿನಲಿ ಬಂಧಿಸಿದ ದೇಹವ  ಮಣ್ಣುಗೂಡಿಸಬೇಡ ಜ್ಞಾನದ
ಕಣ್ಣದೃಷ್ಟಿಯನ್ನಿತ್ತು ರಕ್ಷಿಸು ನಮ್ಮನನವರತ || ೯೩ ||
ಬೀಯವಾಗುವ ತನುವಿನಲಿ ನಿ  ರ್ದಾಯಕನು ನೀನಿರ್ದು ಅತಿ ಹಿರಿ
ದಾಯ ಸಂಬಡಿಸುವರೆ ನೀನನುಕೂಲವಾಗಿರ್ದು ||
ತಾಯನಗಲಿದ ಶಿಶುವಿನಂದದಿ  ಬಾಯಬಿಡುವಂತಾಯ್ತಲೇ ಚಿಂತಾ
ದಾಯಕನೆ ಬಿಡಬೇಡ ರಕ್ಷಿಸು ನಮ್ಮನನವರತ || ೯೪ ||
ಮೊದಲು ಜನನರಿಯೆ ಮರಣಿದ ಹದನ ಕಡೆಯಲಿ ತಿಳಿಯೆ ನಾನು
ಮದ್ಯಽದಲಿ ನೆರೆ ನಿಪುಣನೆಂಬುದು ಬಳಿಕ ನಗೆಗೇಡು ||
ಮೊದಲುಕಡೆ ಮಧ್ಯಗಳ ಬಲ್ಲವ  ಮದನಜನಕನು ನೀನು ನಿನ್ನಯ
ಪದಯುಗವ ಬಯಸುವೆನು ರಕ್ಷಿಸು ನಮ್ಮನನವರತ || ೯೫ ||
ಸಾರವಿಲ್ಲದ ದೇಹವಿದು ನಿ  ಸ್ಸಾರವಾಗಿಹ ತನುವಿನಲಿ ಸಂ
ಚಾರಿಯಾಗಿಹ ನೀನಿದ್ದು ಕಡೆಯಲಿ ತೊಲಗಿ ಹೋಗುತಲಿ ||
ದೂರ ತಪ್ಪಿಸಿಕೊಂಡು ಬರಿಯಪ  ದೂರ ಹೊರಿಸಿದೆ ಜೀವನದಲಿ ಇದ
ನಾರು ಮೆಚ್ಚುವರಕಟ ರಕ್ಷಿಸು ನಮ್ಮನನವರತ || ೯೬ ||
ಅಂಡವೆರಡುದ್ಭವಿಸಿದವು  ಬ್ರಹ್ಮಾಂಡವದರೊಪಾದಿಯಲಿ ಪಿಂ
ಡಾಂಡವೆಸೆದುದು ಸ್ಥೂಲಕಾರಣ ಸೂಕ್ಷ್ಮತನುವಿನಲಿ ||
ಅಂಡ ನಿನ್ನಯ ರೋಮಕೂಪದೊ  ಳಂಡಲೆದವಖಿಲಾಂಡವಿದು ಬ್ರ
ಹ್ಮಾಂಡನಾಯಕ ನೀನು ರಕ್ಷಿಸು ನಮ್ಮನನವರತ || ೯೭ ||
ಒಂದು ದಿನ ತನುವಿನಲಿ ನಡೆವುದು  ಭಾಸ್ಕರಸ್ವರಗಳಿಪ್ಪ
ತ್ತೊಂದು ಸಾವಿರದಾನೂರನು ಏಳುಭಾಗದಲಿ ||
ಬಂದದನು ಉಡುಚಕ್ರದಲ್ಲಿಗೆ  ತಂದು ಧಾರೆಯನೆರೆದ ಮುನಿಕುಲ
ವೃಂದಹೃದಯನು ನೀನು ರಕ್ಷಿಸು ನಮ್ಮನನವರತ || ೯೮ ||
ತೊಲಗುವರು ಕಡೆಕಡೆ ತಾ ಹೊಲೆ  ಹೊಲೆನುತ ಕಳವಳಿಸಿ ಮೂತ್ರದ
ಬಿಲದೊಳಗೆ ಬಂದಿಹುದು ಕಾಣ ಬರಿದೆ ಮನನೊಂದು ||
ಜಲದೊಳಗೆ ಮುಳುಗಿದರೆ ತೊಲಗದು  ಹೊಲಗೆಲಸವೀದೇಹದೊಳು ನೀ
ನೆಲೆಸಿರಲು ಹೊಲೆಯುಂಡೆ ರಕ್ಷಿಸು ನಮ್ಮನನವರತ || ೯೯ ||
ಬರಿದಹಂಕಾರದಲಿ ತತ್ವದ  ಕುರುಹ ಕಾಣದೆ ನಿನ್ನ ದಾಸರ
ಜರೆದು ವೇದ ಪುರಾಣ ಶಾಸ್ತ್ರಗಳೋದಿ ಫಲವೇನು ||
ನರರು ದುಷ್ಕರ್ಮದಲಿ ಮಾಡಿದ  ದುರಿತವಡಗಲು ನಿನ್ನ ನಾಮ
ಸ್ಮರಣೆಯೊಂದೇ ಸಾಕು ರಕ್ಷಿಸು ನಮ್ಮನನವರತ || ೧೦೦ ||

ಎಂಜಲೆಂಜಲು ಎಂಬರಾನುಡಿ  ಎಂಜಲಲ್ಲವೆ ವಾರಿ ಜಲಚರ
ಎಂಜಲಲ್ಲವೆ ಹಾಲು ಕರುವಿನ ಎಂಜಲೆನಿಸಿರದೆ ||
ಎಂಜಲೆಲ್ಲಿಯನೆಲ್ಲಯುಂ ಪರ  ರೆಂಜಲಲ್ಲದೆ ಬೇರೆ ಭಾವಿಸ
ಲೆಂಜಲುಂಟೇ ದೇವ ರಕ್ಷಿಸು ನಮ್ಮನನವರತ || ೧೦೧ ||
ಕೇಳುವುದು ಹರಿಕಥೆಯ ಕೇಳಲು  ಹೇಳುವುದು ಹರಿಭಕ್ತಿ ಮನದಲಿ
ತಾಳುವುದು ಹಿರಿಯದಾಗಿ ನಿನ್ನಯ ಚರಣಸೇವೆಯಲಿ ||
ಊಳಿಗವ ಮಾಡುವುದು ವಿಷಯವ  ಹೂಳುವುದು ನಿಜಮುಕ್ತಿ ಕಾಂತೆಯ
ನಾಳುವುದು ಕೃಪೆಮಾಡಿ ರಕ್ಷಿಸು ನಮ್ಮನನವರತ || ೧೦೨ ||
ಈ ತೆರೆದೊಳಚ್ಯುತನ ನಾಮದ  ನೂತನದಿ ವಸುಧಾತಲದಿ ವಿ
ಖ್ಯಾತಿ ಬಯಸದೆ ಬಣ್ಣಿಸಿದೆ ಭಾಮಿನಿಯ ವೃತದಲಿ ತಾನು ||
ನೀತಿಕೋವಿದರಾಲಿಸುವದತಿ  ಪ್ರೀತಿಯಲಿ ಕೇಳ್ವವರಿಗೆ ಅಸುರಾ
ರಾತಿ ಚೆನ್ನಿಗರಾಯ ಸುಖಗಳನೀವನನವರತ || ೧೦೩ ||
ಬಾದರಾಯಣ ಪೇಳ್ದ ಭಾರತಕಾದಿಕರ್ತನು ದಾರ ಶ್ರೀಪುರ
ದಾದಿ ಕೇಶವಮೂರ್ತಿಗಂಕಿತವಾದ ಚರಿತೆಯನು ||
ಮೇದಿನಿಯೊಳಿದನಾರು ಹೃದಯದೋ  ಳಾದರಿಸಿ ಕೇಳ್ವಪರು ಮುದದಲಿ
ಯಾದಿಮೂರುತಿ ವರಪುರಾಧಿಪನೊಲಿವನನವರತ || ೧೦೪ ||
ಕುಲಗಿರಿಗಳನ್ವಯವ ಧಾರಿಣಿ ಜಲದ ಪಾವಕ ಮರುತ ಜಲ ನಭ
ಜಲಜಸಖ ಶೀತಾಂಶು ತಾರೆಗಳುಳ್ಳ ಪರಿಯಂತ ||
ಚಲನೆಯಿಲ್ಲದೆ ನಿನ್ನ ಚರಿತೆಯು  ಒಲಿದು ಧರೆಯೊಳಗೊಪ್ಪುವಂದದಿ
ಚಲುವ ಚೆನ್ನಿಗರಾಯ ರಕ್ಷಿಸು ನಮ್ಮನನವರತ || ೧೦೫ ||
ನೂರುಕನ್ಯಾದಾನವನು ಭಾ  ಗೀರಥಿಸ್ನಾನವನು ಮಿಗೆ ಕೈ
ಯಾರ ಗೋವ್ಗಳ ಪ್ರೇಮದಿಂದಲಿ ಭೂಸುರರಿಗೊಲಿದು ||
ಊರುಗಳನೂರಗ್ರಹಾರವ  ಧಾರೆಯೆರದಿತ್ತಂತೆ ಫಲ ಕೈ
ಸೇರುವುದು ಹರಿಭಕ್ತಿಸಾರದ ಕಥೆಯ ಕೇಳ್ವವರಿಗೆ || ೧೦೬ ||
ಮೇರು ಮಂದರನಿಭಸುವರ್ಣವ ವಾರಿ  ಮಧ್ಯದೊಳಿರುವ ಅವನಿಯ
ನಾರಿಯರ ಗಾಯತ್ರಿ ಪಶುಗಳನ್ನಿತ್ತ ಫಲವಹುದು ||
ಧಾರುಣಿಯೊಳೀ ಭಕ್ತಿಸಾರವ  ನಾರು ಓದುವವರಿಗನುದಿನ
ಚಾರುವರಗಳನ್ನಿತ್ತು ರಕ್ಷಿಪನಾದಿಕೇಶವನು || ೧೦೭ ||
ಲೋಕದೊಳಗತ್ಯಧಿಕವೆನಿಸುವ  ಕಾಗಿನೆಲೆಸಿರಿಯಾದಿಕೇಶವ
ತಾ ಕೃಪೆಯೊಳಗೆ ನುಡಿದನು ಈ ಭಕ್ತಿಸಾರವನು ||
ಜೋಕೆಯಲಿ ಬರೆದೋದಿಕೇಳ್ದರ  ನಾಕುಲದಿ ಮಾಧವನು ಕರುಣಿಪ
ಶ್ರೀಕಮಲವಲ್ಲಭನು ಮಿಗೆ ಬಿಡದಾದಿಕೇಶವನು || ೧೦೮ ||